# ಕರ್ನಾಟಕ ಸರ್ಕಾರದ ನಡವಳಿಗಳು

17

ವಿಷಯ: ಸಾವಯವ ಭಾಗ್ಯ ಯೋಜನೆಯ ಕ್ಷೇತ್ರಗಳನ್ನು ಸಾವಯವ ಪ್ರಮಾಣೀಕರಣಕ್ಕೆ ಒಳಪಡಿಸಲು ಕರ್ನಾಟಕ ರಾಜ್ಯ ಸಾವಯವ ಪ್ರಮಾಣನ ಸಂಸ್ಥೆಗೆ (ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ) ಅನುದಾನ ಒದಗಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂ:ಕೃಇ/50/ಎಎಇ/2012, ದಿ: 04-01-2013.
2. ಸರ್ಕಾರದ ಆದೇಶ ಸಂ:ಕೃಇ/58/ಎಎಇ/2013, ದಿ: 11-06-2014.
3. ದಿ: 05-08-2013 ರಂದು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮ ಅನುಷ್ಠಾನಗೊಳಿಸುವ ಬಗ್ಗೆ ನಡೆದ ಸಭೆಯ ನಡವಳಿಗಳು.
4. ಸರ್ಕಾರದ ಆದೇಶ ಸಂ:ಕೃಇ/26/ಕೃರಾಗೊ/2013, ದಿ: 21-10-2013.
5. ದಿ: 29-10-2013 ರಂದು ಮಾನ್ಯ ಕೃಷಿ ರಾಜ್ಯ ಸಚಿವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅಮೃತಭೂಮಿ ಯೋಜನೆಯ ಹಸ್ತಾಂತರದ ಬಗ್ಗೆ ನಡೆದ ಸಭೆಯ ನಡವಳಿ.
6. KSOCA ಸಂಸ್ಥೆ ಪ್ರಸ್ತಾವನೆ ಸಂ: ಕರಾಬೀಮಸಾಪ್ರಸಂ/ಸಾ.ಪ್ರ/ಹಣ/ಬಿಡುಗಡೆ/2014-15, ದಿ: 31-05-2014.
7. ಕೃಷಿ ನಿರ್ದೇಶಕರ ಪತ್ರ ಸಂ: ಉಕೃನಿ/ಸಾಕೃಘ/ KSOCA/2014-15, ದಿ: 3/28-06-2014.

**ಪ್ರಸ್ತಾವನೆ:**

ಸಾವಯವ ಕೃಷಿ ಮತ್ತು ಸಾವಯವ ಕೃಷಿ ಉತ್ಪನ್ನಗಳ ಮಾರುಕಟ್ಟೆಯು ಸರ್ಕಾರದ ಆದ್ಯತೆಯ ವಿಷಯವಾಗಿರುತ್ತದೆ. ಸಾವಯವ ಕೃಷಿಕರ ಆರ್ಥಿಕ ಪರಿಸ್ಥಿತಿ ಸುಧಾರಿಸಲು, ರಾಜ್ಯದ ಸಾವಯವ ಕೃಷಿ ಉತ್ಪನ್ನಗಳ ಮಾರುಕಟ್ಟೆಗೆ ಪ್ರೋತ್ಸಾಹ ನೀಡಲು ಕೃಷಿ ಇಲಾಖೆಯು ಹೊಸದಾಗಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಸಾವಯವ ಉತ್ಪನ್ನಗಳ ಮಾರುಕಟ್ಟೆಗೆ ಕ್ಷೇತ್ರಗಳ ಸಾವಯವ ಪ್ರಮಾಣೀಕರಣ ಅತ್ಯಾವಶ್ಯಕವಾಗಿರುತ್ತದೆ.

ಉಲ್ಲೇಖ (1) ರಲ್ಲಿ ದಿ: 04-01-2013ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ರಾಜ್ಯ ಬೀಜ ಪ್ರಮಾಣನ ಸಂಸ್ಥೆಯನ್ನು ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆಯೆಂದು (KSOCA) ನೊಂದಣಿ ಕಾಯ್ದೆಯಡಿ ನೋಂದಾಯಿಸಿಕೊಳ್ಳಲು ಆದೇಶಿಸಿದೆ (ಮರು ನಾಮಕರಣ ಮಾಡಿಕೊಳ್ಳಲು).

ಉಲ್ಲೇಖ (2)ರ ಸರ್ಕಾರದ ಸೇರ್ಪಡೆ ಆದೇಶದಲ್ಲಿ ಸಾವಯವ ಪ್ರಮಾಣೀಕರಣಕ್ಕೆ ಸ್ವತಂತ್ರ ಸಾವಯವ ಪ್ರಮಾಣೀಕರಣ ವಿಭಾಗ ಸೃಷ್ಟಿಸಿ, ಒಂದು ಪ್ರತ್ಯೇಕ ಕರ್ನಾಟಕ ರಾಜ್ಯ ಸಾವಯವ ಪ್ರಮಾಣೀಕರಣ ಸಂಸ್ಥೆ ಎಂದು ಹೆಸರಿಸಿ ಆದೇಶಿಸಿದೆ.

ಮೇಲೆ (3)ರಲ್ಲಿ ಓದಲಾದ ಸಭೆ ಹಾಗೂ (4)ರ ಸರ್ಕಾರದ ಆದೇಶ ಅನುಸಾರ ಸಾವಯವ ಭಾಗ್ಯ ಯೋಜನೆಯಡಿ ಸಾವಯವ ಗುಂಪು ಪ್ರಮಾಣೀಕರಣಕ್ಕೆ ಹೆಚ್ಚಿನ ಒತ್ತು ನೀಡಲು ಮತ್ತು ಯೋಜನೆಯಡಿ ಪ್ರತಿ ಹೋಬಳಿಯ ಯೋಜನೆಯ ಅನುಷ್ಠಾನ ಪ್ರದೇಶವನ್ನು ಹೊಸದಾಗಿ ಸ್ಥಾಪನೆಗೊಂಡಿರುವ KSOCA ವತಿಯಿಂದ ಮತ್ತು ಸದರಿ ಸಂಸ್ಥೆಯ ಉಸ್ತುವಾರಿ ಸಮನ್ವಯದೊಂದಿಗೆ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇತರೆ APEDA ಅನುಮೋದಿತ (Accredited) ಸಂಸ್ಥೆಗಳ ಮುಖಾಂತರ ಗುಂಪು ಪ್ರಮಾಣೀಕರಣಕ್ಕೆ ಒಳಪಡಿಸಲು ಸಹಾಯಧನ ನೀಡಲು ತೀರ್ಮಾನಿಸಲಾಗಿದೆ.

..2..

ಮುಂದುವರೆದು, ಮೇಲೆ ಓದಲಾದ (4)ರ ಸರ್ಕಾರದ ಆದೇಶದ ಪ್ರಕಾರ ಪ್ರತಿ ಹೋಬಳಿಯ ಗುಂಪು ಪ್ರಮಾಣೀಕರಣಕ್ಕೆ (100 ಹೆಕ್ಟೇರ್ ಪ್ರದೇಶ) ರೂ.25000/- ಆಂತರಿಕ ನಿಯಂತ್ರಣದ ವ್ಯವಸ್ಥೆ ಸ್ಥಾಪನೆಗೆ (Trace Net System ಅಳವಡಿಕೆ ಮತ್ತು GPS ಬಳಕೆ ಸೇರಿದಂತೆ) ರೂ.10000 ಮತ್ತು ಸಾವಯವ ಕೃಷಿಕರ ದಿನಚರಿಗೆ ರೂ.5000/- ಸಹಾಯಧನವನ್ನು ಒದಗಿಸಲು ಆದೇಶಿಸಿದೆ.

ಮೇಲೆ ಓದಲಾದ (5)ರ ಮಾನ್ಯ ಕೃಷಿ ರಾಜ್ಯ ಸಚಿವರ ಅಧ್ಯಕ್ಷತೆಯಲ್ಲಿ ದಿ: 29-10-2013 ರಂದು ಜರುಗಿದ ಸಭೆಯ ನಡವಳಿಯಲ್ಲಿ ಕೃಷಿ ಇಲಾಖಾ ವತಿಯಿಂದ ಅನುಷ್ಠಾನಗೊಳಿಸಿದ ಸಾವಯವ ಕೃಷಿ ಮಿಷನ್ ಯೋಜನೆಯಡಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ಯೋಜನೆ ಅನುಷ್ಠಾನಕ್ಕಾಗಿ ತೆರೆದಿದ್ದ ಜಂಟಿ ಖಾತೆಯಲ್ಲಿ ಉಳಿಕೆಯಾಗಿರುವ ಅನುದಾನದಲ್ಲಿ ಹಾಗೂ ಕೇಂದ್ರ ಕಛೇರಿಯಲ್ಲಿ State Agriculture Management Agency (SAMA) ಖಾತೆಯಲ್ಲಿ ಉಳಿಕೆಯಾಗಿರುವ ಅನುದಾನವನ್ನು ಪ್ರಸ್ತುತ ಜಾರಿಯಲ್ಲಿರುವ ಸಾವಯವ ಕೃಷಿ ಉತ್ಪನ್ನ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲು ತೀರ್ಮಾನ ಕೈಗೊಳ್ಳಲಾಗಿದೆ. ಸಧ್ಯದಲ್ಲಿ SAMA ಖಾತೆಯಲ್ಲಿ ರೂ.282.00 ಲಕ್ಷ ಅನುದಾನ ಲಭ್ಯತೆ ಇದ್ದು, ತಾಲ್ಲೂಕುಗಳ ಸಾವಯವ ಕೃಷಿ ಮಿಷನ್ ಜಂಟಿ ಖಾತೆಯಲ್ಲಿ ಬಳಕೆಯಾಗದೆ ಉಳಿದಿರುವ ಇನ್ನು ಸುಮಾರು ರೂ.1250.00 ಲಕ್ಷ ಅನುದಾನ ಕೇಂದ್ರ ಕಛೇರಿಯ SAMA ಖಾತೆಗೆ ವರ್ಗಾವಣೆಯಾಗಲಿದೆ.

ಮೇಲೆ ಓದಲಾದ (6) ರ ಪತ್ರದಲ್ಲಿ KSOCA ಸಂಸ್ಥೆ ಸಾವಯವ ಪ್ರಮಾಣನ ಕಾರ್ಯಕ್ಕೆ ನಿಗಧಿಪಡಿಸಿದ ವಿವಿಧ ಸೇವಾ ಶುಲ್ಕದ ವಿವರ ನೀಡಿ, ಒಟ್ಟಾರೆ ರೂ.228.40 ಸದರಿ ಸಂಸ್ಥೆಗೆ ಪಾವತಿಸಲು ಕೋರಿದ್ದಾರೆ.

ಮೇಲೆ ಓದಲಾದ (7) ರ ಪತ್ರದಲ್ಲಿ ಕೃಷಿ ನಿರ್ದೇಶಕರು KSOCA ಸಂಸ್ಥೆಯು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಗಣಿಸಿ, ಹೋಬಳಿ ಮಟ್ಟದ ಸಾವಯವ ಭಾಗ್ಯ ಯೋಜನೆಯ ಅನುಷ್ಠಾನ ಪ್ರದೇಶಗಳನ್ನು ಸಾವಯವ ಪ್ರಮಾಣೀಕರಣಕ್ಕೆ ಒಳಪಡಿಸಲು ಕರ್ನಾಟಕದ ರಾಜ್ಯ ಸಾವಯವ ಪ್ರಮಾಣನ ಸಂಸ್ಥೆಗೆ ಒಟ್ಟು ರೂ.228.40 ಲಕ್ಷ ಅನುದಾನವನ್ನು ಸಾವಯವ ಕೃಷಿ ಮಿಷನ್ ಕಾರ್ಯಕ್ರಮಗಳಿಗೆ ಬಳಕೆಯಾಗದೇ ಕೇಂದ್ರ ಕಛೇರಿಯ SAMA ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಒದಗಿಸಲು ಅನುಮೋದನೆ ಮತ್ತು ಸೂಕ್ತ ಸರ್ಕಾರದ ಆದೇಶ ಹೊರಡಿಸಲು ಕೋರಿದ್ದಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/102/ಕೃರಾಗೊ/2013, ಬೆಂಗಳೂರು,**
**ದಿನಾಂಕ: 14-08-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಹೋಬಳಿ ಮಟ್ಟದ ಸಾವಯವ ಭಾಗ್ಯ ಯೋಜನೆಯ ಕ್ಷೇತ್ರಗಳನ್ನು ಸಾವಯವ ಪ್ರಮಾಣೀಕರಣಕ್ಕೆ ಒಳಪಡಿಸಲು ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆಗೆ ಒಟ್ಟು ರೂ.228.40 ಲಕ್ಷ (ಇನ್ನೂರಾ ಇಪ್ಪತ್ತೆಂಟು ಲಕ್ಷ ನಲವತ್ತು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ಕೇಂದ್ರ ಕಛೇರಿಯ State Agriculture Management Agency (SAMA) ಬ್ಯಾಂಕ್ ಖಾತೆಯಲ್ಲಿ ಸಾವಯವ ಕೃಷಿ ಮಿಷನ್ ಕಾರ್ಯಕ್ರಮಗಳಿಗೆ ಬಳಕೆಯಾಗದೇ ಲಭ್ಯವಿರುವ ಅನುದಾನದಲ್ಲಿ ಬಳಸಿಕೊಳ್ಳಲು ಅನುಮತಿ ನೀಡಿ ಆದೇಶಿಸಿದೆ.

..3..

ಈ ಸಂಬಂಧ ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ ಸಲ್ಲಿಸುವ ಬಿಲ್ಲಿಗೆ ಮೇಲು ಸಹಿ ಮಾಡಿ ಪಾವತಿಸುವ ಅಧಿಕಾರವನ್ನು ಕೃಷಿ ನಿರ್ದೇಶಕರಿಗೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜ್ಯೋತಿ.ಆರ್.ಜೆ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

ಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ, ಹೆಬ್ಬಾಳ, ಬೆಂಗಳೂರು.
6. ನಿರ್ದೇಶಕರು, ಖಜಾನೆ ಇಲಾಖೆ(SHT), ಬೆಂಗಳೂರು.
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ.
9. ಸರ್ಕಾರದ ಉಪ ಕಾರ್ಯದರ್ಶಿ -1 ಮತ್ತು 2, ಕೃಷಿ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿ, ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ.
11. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-4 ಮತ್ತು 5), ಆರ್ಥಿಕ ಇಲಾಖೆ.
12. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.